ಮೈಸೂರ ಗೆಜೆಟ್.

ಸಂ. 38 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ 1889.

ಬೆಂಗಳೂರು, ಶನಿವಾರ, ಸೆಪ್ಟೆಂಬರ್ ತಾ|| 21, ಸನ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣ್ಡಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಿಗಳು, ಫಾರೆಸ್ಟು ಇನ್‌ಸ್ಪೆಕ್ಟರ ಜನರಲ್ಲಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜೀರು, ಡಿಸ್ಟ್ರಿ ಪೆಪ್ಯುಟಿ ಕಮ್ಮಿಷನರುಗಳು, ಸಬ್‌ಡಿವಿಜನೆಲ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಫ್ಲೂರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣ್ಡಾದ ಇಸ್ತಿಹಾರ್‌ಗಳು ಮೈಗೆರೆ; ಕಾಲಸ್ಥಿತೀ ರಪೋರ್ಟುಗಳು; ಪೋಸ್ಟ್‌ಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಅಕ್ಕೃಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣ್ಡಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 27ನೇ ಆಗಸ್ಟ್ 1889.

ನಂ. 141.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಕೋಲಾರದ ಬಂಗಾರ ಗನಿಗಳ ಪ್ರಾಂತ್ಯದಲ್ಲಿ ಹಾಲಿ ತಜಬೀರಾಗಿರುವ ಮುಫೊಸಿಲ್ ಬಂಗ್ಲೆಯು ಫಸ್ಟ್ ಕ್ಲಾಸ್ ಮುಸಾಫರ್ ಬಂಗ್ಲೆಯಂತೆ ಯಣಿಸಲ್ಪಡತಕ್ಕದ್ದು.

ತಾರೀಖು 20ನೇ ಆಗಸ್ಟ್ 1889.

ನಂ. 147.—1879ನೇ ಇಸವಿಯ ಇಂಡಿಯನ್ ಸ್ಟ್ಯಾಂಪ್ ಆಕ್ಟಿನ 8ನೇ ಸೆಕ್ಷನ್ನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವವರಲ್ಲಿ ಶ್ರೀಮನ್ಮಹಾರಾಜ ಸರ್ಕಾರದವರು ಹುಕುಂ ಮಾಡುವದೇನಂದರೆ, ಒಂದು ಜಾಯಿಂಟ್ ಸ್ಟಾಕ್ ಕಂಪನಿಯಿಂದ ಆಫಾರ ಪತ್ರದ ಷರತ್ತುಗಳನುಸರಿಸಿ ಸದರೀ ಕಂಪನಿಯ ಪೂರಾ ಯಾ ವಂದು ಭಾಗದ ಆಸ್ತಿಯನ್ನ ಡಿಬೆಂಚರ್ ಪತ್ರದಾರರು ಮತ್ತು ಪೆಪರ್ ಪತ್ರಕ್ಕೆ ಕೀರಸ್ಪಟಂಥಾ ಬಡ್ಡಿ ಚೀಟುಪುಳ್ಳವರು ಯಿವರುಗಳ ಪ್ರಯೋಜನಕ್ಕಾಗಿ ಟ್ರಸ್ಟೀಸ್ ಯಾನೆ ಖಾತರ್‌ದಾರರಿಗೆ ಒಪ್ಪಿಸುವಂಥಾ ಸದರೀ ಆಕ್ಟು ಅನುಸಾರವಾಗಿ ಹುಟ್ಟುವ ಡಿಬೆಂಚರ್ ಪತ್ರಗಳ ಮೇಲೆ ವಸೂಲ್‌ಮಾಡಲ್ಪಡಬೇಕಾದ ಸ್ಟ್ಯಾಂಪ್ ತೀರ್ವೆಯು ಮತ್ತು

ತಾರೀಖು 23ನೇ ಆಗಸ್ಟ್ 1889.

ನಂ. 145.—ಗವರ್ನಮೆಂಟ್ ಡಿಸ್ಪೆಲೇರಿಯಿಂದ ಒಟ್ಟು ಬಿಕರೀ ಡಿಪೋಗಳಿಗೆ ಸಾಗಿಸಲ್ಪಡುವಂತಾ ಪಟಾಬಿನಮೇಲೆ ಸರಿಯಾದ ತನಖಿ ನಡಿಸತಕ್ಕ ಬಗ್ಯಾಗಿ (1888ನೇ ಇಸವಿ ಜನವರಿ 24ನೇ ಮತ್ತು ಮಿನ 185ನೇ ನಂಬರ್ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡೋಣಾದ) ನಿಬಂಧನೆಗಳ ಇದರಡಿಕ್ಕಂಡ ತಿದ್ದುಪಾಟುಗಳನ್ನು ಶ್ರೀಮ್ ಮಹಾರಾಜಾ ಸರ್ಕಾರದವರು ಮಂಜೂರ್ಮಾಡಿರುತ್ತಾರೆಯಾಗಿ, ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಪ್ರಕಟಿಸೋಣಾಗಿರುತ್ತದೆ.

I. 7ನೇ ನಿಬಂಧನೆಯ ಕಡೇಭಾಗದಲ್ಲಿ "ಆತರುವಾಯ, ರದ್ದಾದ ರಹದಾರಿಗಳ ಫೈಲು ಬೆಂಗಳೂರು ಡಿಸ್ಟ್ರಿಕ್ಟ್ ಪೆಪ್ಯುಟಿ ಕಮ್ಮಿಷನರವರ ಬಳಿಗೆ ರವಾನಿಸಲ್ಪಡತಕ್ಕದ್ದು" ಯಂಬ ಮಾತುಗಳಿಗೆ ಬದಲಾಗಿ, "ಆತರುವಾಯ, ರದ್ದಾದ ರಹದಾರಿಗಳ ಫೈಲು ಎಕ್ಸೈಜ್ ಕಮ್ಮಿಷನರವರ ಬಳಿಗೆ ರವಾನಿಸಲ್ಪಡತಕ್ಕದ್ದು" ಯಂಬ ಮಾತು ಕೀರಿಸತಕ್ಕದ್ದು.

II. 8ನೇ ನಿಬಂಧನೆಗೆ ಬದಲಾಗಿ ಇದರಡಿ ಕಂಡ ಕಲಮನ್ನು ಕೀರಿಸತಕ್ಕದ್ದು—ಏನಂದರೆ.

" 8. ರಹದಾರಿಗಳು, ಎಕ್ಸೈಜ್ ಕಮ್ಮಿಷನರ ಆಫಿಸಿಗೆ ಬಂದು ಡಾಖಲ್ ಆದಹಾಗ್ಗೂ ಸ್ಪೆಷಿಯಲ್ ಅಸಿಸ್ಟೆಂಟ್ ಕಮ್ಮಿಷನರವ
" ರಿಂದ ಕಳುಹಿಸಲ್ಪಟ್ಟ ಸಂಸ್ಥಾನಾ ಮುಳೆ ತಪಸೀಲ್ದಾರ್ ಲಿಖಿತಗಳೊಂದಿಗೆ ಮೊಕಾಬಿಲೆ ಮಾಡಲ್ಪಡತಕ್ಕದ್ದು. ಎಕ್ಸೈಜ್ ಕಮ್ಮಿಷನ
" ರು ರದ್ದಾದ ರಹದಾರಿಗಳ ಪೂರ್ತು ಫೈಲನ್ನು ಪ್ರತಿ ತಿಂಗಳಲ್ಲೂ ದಿವಾಣರವರ ಆಫಿಸಿಗೆ ಕಳುಹಿಸಬೇಕಾದ್ದಲ್ಲದೆ, ಅವುಗಳ ತನಖಿ ವರ್ಷ
" ವಸಾನದ ತಪಶೀಲ್ ಸಹ ತಿಳಿಸಬೇಕು. ಸದರೀ ಫೈಲು ದಿವಾಣರವರ ಆಫಿಸಿನಲ್ಲಿ ಪರಿಶೋಧನೆ ವ ತನಖಿ ಆದನಂತರ ಎಕ್ಸೈಜ್ ಕಮ್ಮಿ
" ಷನರವರಿಗೆ ವಾಪಸ್ ಮಾಡಲ್ಪಡತಕ್ಕದ್ದು. ಆವರು ಆ ರದ್ದಾದ ರಹದಾರಿಗಳನ್ನ ತಮ್ಮಬಳಿ ವೌಚರಿನಂತೆ ಕಂಟ್ರಾಕ್ಟು ಪೂರೈಸಿದ
" ಆರು ತಿಂಗಳ ವರಿಗೂ ಯಿಟ್ಟುಕೊಂಡಿದ್ದು ಆ ತರುವಾಯ ನಾಶಪಡಿಸ ಬಹುದು."

ತಾರೀಖು 31ನೇ ಆಗಸ್ಟ್ 1889.

ನಂ. 153.—ಕೆಲವು ಇನಾಂದಾರರುಗಳು ತಮ್ಮ ಜವಾಬ್ದಾರಿಯಿಂದಲೇ ತಮ್ಮ ತಮ್ಮ ಇನಾಂ ಕೆರೆಗಳಕೋಡಿ ಅಗಲದಲ್ಲಿ ಬದಲಾವಣಿ ಮಾಡಿರುವದಾಗಿ ತಿಳುವಳಿಕೆಗೆ ಬಂದಿರುವದ್ದರಿಂದ ಗವರ್ನಮೆಂಟಿನವರು ಇದರಿಂದ ತಿಳಿಯಪಡಿಸುವದೇನಂದರೆ, ಇನಾಂ ಕೆರೆಗಳ ಕೋಡಿ ವ ಇತರ ಕಟ್ಟಡದ ಕ್ರಮದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾವರೀತಿಯಾದರೂ ಬದಲಾವಣಿ ಮಾಡಿದಲ್ಲಿ ಅಂಥಾ ಕೆರೆಗಳ ಕೆಳಗಡೆ ಇರುವ ಸರ್ಕಾರೀ ಕೆರೆಗಳು ವಜಾ ಹೋಗಿತಾರ್ದರಿಂದ ಯಿನ್ನುಮೇಲೆ ಅಂತಾ ಬದಲಾವಣಿಯಾಗ ತಕ್ಕದ್ದಲ್ಲವೆಂದು ಗವರ್ನಮೆಂಟಿನವರು ನಿಷೇಧಿಸುತ್ತಾರೆ.

ನಂ. 159.—ಸ್ನ 1888ನೇ ಇಸವಿ ನವಂಬರ್ 10ನೇ ಮತ್ತು ಮಿನ ಗೆಜೆಟ್‌ನಲ್ಲಿ ಫಾಯಿಷ್ ಮಾಡೋಣಾದ 1888ನೇ ಇಸವಿ ಆಕ್ಟೋಬರ್ 26ನೇ ಮತ್ತು ಮಿನ 148ನೇ ನಂಬರುಳ್ಳ ಇಸ್ತಿಹಾರ್ ಅನುಸರಿಸಿ ತಿಳಿಯಪಡಿಸುವದೇನಂದರೆ, ತೀರ್ಥಕಾರಿಪುರದ ತಾಲ್ಲೂಕು ಪೈಕಿ ದಾನಂದೂರು ಮಾಗಣಿಗೆ ಕೀರಿವ ದಾನಂದೂರು ಗ್ರಾಮವು ಸದರೀ ಇಸ್ತಿಹಾರ್‌ನಾಮೆಗೆ ಲಗ್ಗತ್ತಾಗಿರುವ A ಗುರ್ತುಳ್ಳ ಅರ್ಪೆಡಿಕ್ಷನಮೊದಾದ ವಿವಮೊಗ್ಗಾ ಡಿಸ್ಟ್ರಿಕ್ಟಿನ ಮಲ್ನಾಡ್ ಪ್ರದೇಶದೊಂದಿಗೆ ಕೀರಿಸಲ್ಪಟ್ಟಿರುತ್ತೆ.

A ಗುರ್ತುಳ್ಳ ಅರ್ಪೆಡಿಕ್ಷನಲ್ಲಿ "ತೀರ್ಥಕಾರಿಪುರ ತಾಲ್ಲೂಕು ಪೈಕಿ ಬರನೆ" ಯಂಬವಕ್ಕೆ ಬದಲಾಗಿ "ತೀರ್ಥಕಾರಿಪುರ ತಾಲ್ಲೂಕಿನಲ್ಲಿರುವ ಬರೂರು" ಯಂಬದಾಗಿ ಓದಿಕೊಳ್ಳತಕ್ಕದ್ದು.

12ನೇ ಕಲಮಿನಲ್ಲಿ "9ನೇ ರೂಲ್ಸಿನಲ್ಲಿ" ಯಂಬದಕ್ಕೆ ಬದಲಾಗಿ "8ನೇ ರೂಲ್ಸಿನಲ್ಲಿ" ಯಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 17ನೇ ಸೆಪ್ಟಂಬರ್ 1889.

ನಂ. 178.—ಈ ವರುಷದ ದಸರಾ ಹಬ್ಬಕ್ಕೋಸ್ಕರ 1889ನೇ ಇಸವಿ ಅಕ್ಟೋಬರ್ 1ನೇ ಮಂಗಳವಾರದ ಮೊದಲು ಆದೇ ತಿಂಗಳು 10ನೇ ಗುರುವಾರದ ಪರ್ಯಂತ ರಜಾದಿವಸಗಳಾಗಿರುತವೆ.

ತಾರೀಖು 6ನೇ ಸೆಪ್ಟಂಬರ್ 1889.

ನಂ. 160.—ಪೊಲೀಸ್ ಹೆಡ್‌ಕ್ವಾರ್ಟರ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರಾದ ಮೆ॥ ಏ. ಕೃಷ್ಣಸ್ವಾಮಿಯ್ಯಂಗಾರ್ಯವರು, ಅವರಿಗೆ 1889ನೇ ಇಸವಿ ಆಗಸ್ಟ್ 7ನೇ ಮತ್ತುಂ 114ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೀಜ್ ರಜಾದಿಂದ ಅದೇ ಮಾಹೆ 26ನೇ ಮತ್ತು ಮಿನ ಪೂರ್ವಾಹ್ನದಲ್ಲಿ ಮತ್ತೆ ಉದ್ಯೋಗದ ಮೇಲೆ ಹಾಜರಾಗಿರುತ್ತಾರಾದ್ದರಿಂದ, ಉಪಯೋಗಿಸಿಕೊಳ್ಳಲ್ಪಡದ ಭಾಗ ಅಂದರೆ, 9 ದಿವಸಗಳ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ನಂ. 161.—ಪಾವಗಡ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಕೊಮಾರಸಾಮಿನಾಯಕರಿಗೆ, ಅವರು ಉಪಯೋಗಿಸಿಕೊಂಡ ಲಾಗಾಯತು ಕಾಹಿಲೇ ಸರ್ಟಿಫಿಕೇಟಿನ ಮೇಲೆ ಯರಡು ತಿಂಗಳ ಸೀಕ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 164.—1889ನೇ ಇಸವಿ ಜೂ॥ 18ನೇ ಮತ್ತುಂ 304—6ನೇ ನಂಬರ್‌ವುಳ್ಳ ಗವರ್ನಮೆಂಟ್ ಪ್ರೊಸಿಡಿಂಗ್ಸಿನ ಪರಾಮರ್ಶಗಳನುಸರಿಸಿ, ಹಾಸನ ಡಿಸ್ಟ್ರಿಕ್ಟಿನ 3ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜಿಯನ್ ಮೆ॥ ಏ. ಯಸ್. ಅಚ್ಚುತರಾಯರಿಗೆ, 1889ನೇ ಇಸವಿ ಏಪ್ರಿಲ್ 6ನೇ ಲಾಗಾಯತು ಎರಡನೇ ಕ್ಲಾಸಿಗೆ ಬಡ್ತೀ ಮಾಡಲ್ಪಟ್ಟಿರುತ್ತೆ.

263

ತಾರೀಖು 9ನೇ ಸೆಪ್ಟೆಂಬರ್ 1889.

ನಂ. 162.—1889ನೇ ಇಸವಿ ಫಿಬ್ರವರೀ 5ನೇ ಮುಕ್ತುವಿನ 7140—71—200ನೇ ನಂಬರ್ ಪ್ರೊಸಿಡಿಂಗ್ಸಿನ ಪರಠ್ಠುಗಳನುಸರಿಸಿ ಮೈಸೂರು ಡಿಸ್ಟ್ರಿಕ್ಟ್ 2ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಅಂಜಾಜಿರಾಯರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 8 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 165.—ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ರಾಮಚಂದ್ರರಾಯರಿಗೆ. ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 10ನೇ ಸೆಪ್ಟೆಂಬರ್ 1889.

ನಂ. 163.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಯಿದರ ದೇಯಿಂದ ಪ್ರಕಟಪಡಿಸುವದೇನಂದರೆ, ಯಿದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ, ಚಿರಂಡಿ ಮತ್ತು ಹೊಸಮೂರ್‌ಕೆಟ್ಟು ಆಸ್ ಪಾಸ್ ಅಭಿವೃದ್ಧಿಗೋಸ್ಕರ ಬೇಕಾಗಿರುತ್ತೆ

ಪಟ್ಟಿ.

ನಂಬರ್.	ಯಿರತಾದಾರನ ಪ್ರಜೆಯ.	ಸ್ವಂತಗೂರನ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ	ವಿಸ್ತೀರ್ಣ. ಉತ್ತರ ದಕ್ಷಿಣ	ಮನೆಯ ವಿವರಣೆ.	ಜಮೀನು ಕೆಲಸಕ್ಕೆ ಯಾವ ಸರ್ಕಾರಿ ಕಾಗದ.	ಜಕ್ಕು ಖಂಡಿ.
			ಅಡಿ.	ಅಡಿ.			
		1 ಸೈದ್ ಅಪವ್ಮದ್‌ಖಾದ್ರಿ ..	25	25½	ಜಮೀನು		
		2 ಮೋಥಿಬೀಗಂ .	0	48	ಭಾವಿ		
	ಯಿಲಾಲಸೆ	3 ಪಜೀರ್‌ಬೀಗಂ ..	6	37½	2 ಅಂಕಣ ಗಚ್ಚಿನ ಮಾಳಿಗೆ	ಸರ್ಕಾರಿ ಕೆಲಸಕ್ಕೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಅಳತೆಯುಳ್ಳ ಯಿಲ್ ಗ್ರಾಮದ ಸರ್ವೆ ನಂಬರ್ 5 ಜಮೀನು.	
		4 ಫಾತ್ಮಾಬೀಗಂ ..					
		5 ಆಮಿರ್‌ಬೀಗಂ ..	0	0	ತಳ್ತು ಹೋಪ್ ಮನೆ		
		6 ಬುರಾನುದ್ದೀನ್ ..	0	0			

ನಂ. 166.—ಮೆ॥ ಪಿ. ಪಂಚನಾಥರಾಯರು, 1889ನೇ ಇಸವಿ ಸೆಪ್ಟೆಂಬರ್ 2ನೇ ಮುಕ್ತುವಿನ ಪೂರ್ವಾನ್ವಯದಲ್ಲಿ ತುಮಕೂರು ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಮೆ॥ ಹೆಚ್. ನಂಜುಂಡರಾಜಅರಸಿನವರಿಗೆ ಒಪ್ಪಿಸಿರುತ್ತಾರೆ.

ನಂ. 167.—ಕೋಲಾರ ತಾಲ್ಲೂಕು ಅಮಲ್ದಾರ್ ಅಬ್ದುಲ್ ಅಜೀಜ್‌ರವರು, 1889ನೇ ಇಸವಿ ಫಿಬ್ರವರೀ 5ನೇ ಮುಕ್ತುಂ 7140—71—200ನೇ ನಂಬರ್ ಪ್ರೊಸಿಡಿಂಗ್ಸಿನೊಂದಿಗೆ ಫಾಯಿಷ್ಮಾಡಲ್ಪಟ್ಟ ಪರಿಷ್ಕರಿಸಲ್ಪಟ್ಟ 1ನೇ ರೂಲಿನ ಪರಠ್ಠುಗಳನುಸರಿಸಿ ಅದೇ ಇಸವಿ ಆಗಸ್ಟ್ 25ನೇ ಮುಕ್ತುಂ ಲಾಗಾಯತ್ತು 5 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 168.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರಾದ ಮೆ॥ ಜಿ.ಜಿ. ರಾಮಾನುಜಯ್ಯಂಗಾರ್‌ರವರು, 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳೂ ಮತ್ತು ಅದರಡಿಕಂಡ ಜಾಸ್ತೀ ಅಧಿಕಾರಗಳೂ ಕೊಡಲ್ಪಟ್ಟಿರುತ್ತಾರೆ.

(1) ಛಡೀಸಜಾ ವಿಧಿಸತಕ್ಕ ಅಧಿಕಾರ (ಸೆ॥ 32.)

(2) ಸೆಷನ್ಸ್ ಕೋರ್ಟಿಗೆ ದರ್ಖಾಸ್ತ್ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರ (ಸೆ॥ 206.)

(3) ಸಾಕ್ಷಿಗಳ ವಾಂಗ್ಮೂಲವನ್ನು ಸ್ವದಸ್ತೂರ್ ಇಂಗ್ಲೀಷ್ ಭಾಷೆಯಲ್ಲಿ ಬರೆದುಕೊಳ್ಳುವದಕ್ಕೆ ಅಧಿಕಾರ (ಸೆ. 357.)

ನಂ. 169.—1889ನೇ ಇಸವಿ ಜೂ॥ 18ನೇ ಮುಕ್ತುಂ 304—6ನೇ ನಂಬರ್ ಪ್ರೊಸಿಡಿಂಗ್ಸಿನ ಪರಠ್ಠುಗಳನುಸರಿಸಿ ತುಮಕೂರು ಡಿಸ್ಟ್ರಿಕ್ಟ್ 3ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜಿಯನ್ ಮೆ॥ ಪಿ. ಆರ್. ವೈದ್ಯನಾಥಶಾಸ್ತ್ರಿ, ಯಂ. ಎ., ಯಂ. ಬಿ, ಸಿ. ಯಂ. ಯು ರವರಿಗೆ, ಅವರು 3ನೇ ಕ್ಲಾಸಿನಲ್ಲಿ 5 ವರುಷಗಳ ಸಾರ್ವಿಸ್ ಪೂರ್ತಿಮಾಡಿದ ತಾರೀಖು ಲಾಗಾಯತು ಅಂದರೆ, 1889ನೇ ಇಸವಿ ಸೆಪ್ಟೆಂಬರ್ 5ನೇ ಮುಕ್ತುಂ ಲಾಗಾಯತು 2ನೇ ಕ್ಲಾಸಿಗೆ ಬಡ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ಸೆಪ್ಟೆಂಬರ್ 1889.

ನಂ. 170.—ಹಾಸನದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಹೆಡ್ ಅಕಾಂಟೆಂಟ್ ವೆಂಕಟರಾಮಯ್ಯನವರಿಗೆ, ಹಾಸನ ತಾಲ್ಲೂಕು ಗ್ರಾಮದ ಕಾಯಂ ಡೆಪ್ಯುಟಿ ಅಮಲ್ದಾರ್ರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಸ್ಥಳದ ಡೆಪ್ಯುಟಿ ಅಮಲ್ದಾರಾಗಿ ಮೊಕರ್ರಾಮಡಲ್ಪಟ್ಟಿರುತ್ತದ್ದಲ್ಲದೇ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳೂ ಕೊಡಲ್ಪಟ್ಟಿರುತ್ತೆ

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ಹೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಿಮೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೈಯುಳ್ಳ ದೊಡ್ಡ ಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೇ ಆಗಾಯತು 2 ಘಂಟೆ ಪರ್ಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ ದೊಡ್ಡ ಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಕೆ. ದೊರಸಾಮಿಅಯ್ಯರ್,
ಪ್ರೈವೆಟ್ ಸೆಕ್ರಟರಿ.

ವಿದ್ಯಾಭ್ಯಾಸದ ಇಲಾಖೆ.

1889ನೇ ಇಸವಿ ಸೆಪ್ಟಂಬರ್ ತಾರೀಖು 3.

ಮೈಸೂರು ದೇಶೀಯ ಪರೀಕ್ಷೆ.

ಸ್ಯ 1890ನೇ ಇಸವಿಯಲ್ಲಿ ನಡೆಯುವ ಮೈಸೂರು ದೇಶೀ ವಿದ್ಯಾರ್ಥಿಗಳ ಪರೀಕ್ಷೆಗಾಗಿ ಇದರಡಿಕೆಂಡ ಪ್ರಕಾರ ಬಹುಮಾನಗಳು ಕೊಡಲ್ಪಡುವವು:—

ಹಿಂದುಸ್ತಾನಿ.

ಬೆಂಗಳೂರು ಬಾರ್‌ಕೈ ಗವರ್ನಮೆಂಟ್ ಹಿಂದುಸ್ತಾನಿ ಸ್ಕೂಲ್ ಪಂಡಿಮಾಸ್ಟರ್ ಮಿಯಾಂಫಜಲುಲ್ಲಾ ಯವರಿಂದ. ಬೆಂಗಳೂರು ಮಹಮ್ಮದೀಯ್ಯ ಮದ್ರಸೆಯಿಂದ ತೇರ್ಗಡೆಹೊಂದುವವರ ಪೈಕಿ ಯಲ್ಲಾ ಭಾಗಗಳೂ ಸೇರಿ ಅಧಿಕನಂಬರುಗಳನ್ನ ಹೊಂದುವಂಥಾ ವಿದ್ಯಾರ್ಥಿಗೆ. ನಾಲ್ಕು ಫಾರಸಿ ಪುಸ್ತುಕಗಳು:—ಅಖ್ಲಾಖೆ ಮಹಮ್ಮದಿ, ದಿವಾ ಉರಫಿ, ಜೋಸ್ತ್ರ್ತ ಮತ್ತು ದಿವಾನೇ ಹಾಫಿಜ್.

ಕನ್ನಡ.

ಹಾಸನ ತಾಲ್ಲೂಕು ಗ್ರಾಮದಲ್ಲಿರುವ ಶ್ರೀಮತಂ ತಿರುನಾರಣಯ್ಯಂಗಾರ್ಯರವರಿಂದ ಹಾಸನ ತಾಲ್ಲೂಕು ಗ್ರಾಮದ ಬ್ರಾಂಚ್ ಸ್ಕೂಲಿನಿಂದ ತೇರ್ಗಡೆ ಹೊಂದುವವರ ಪೈಕಿ ಯಲ್ಲಾ ಭಾಗಗಳೂ ಸೇರಿ ಅಧಿಕ ನಂಬರುಗಳನ್ನ ಹೊಂದುವಂಥಾ ವಿದ್ಯಾರ್ಥಿಗೆ, ನಾಲ್ಕುರೂಪಾಯಿ ಬೆಲೆಯುಳ್ಳ ಒಂದು ಪಠ್ಯೀಬಟ್ಟು.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.